# ಕಲ್ಪನೆ ಕಾವ್ಯ



## ಮಣ್ಣು

ಹೊತ್ತುಕೊಳ್ಳದಷ್ಟು
ಹೊರೆಯಲ್ಲ ಜೀವನ
ಇಂದು ನನ್ನ ತಲೆಯ ಮೇಲೆ
ನಾಳೆ ನಿನ್ನ ತಲೆಯ ಮೇಲೆ
ಹೀಗೆ ತಲೆತಲಾಂತರಗಳಿಂದ
ವರ್ಗಾವಣೆಯಾಗುತ್ತಲೇ ಇದೆ

ಹೊರಲೇಬೇಕು ಈ ಭಾರ
ಸಾಕೆಂದು ಬುಟ್ಟಿ ಕೆಳಗಿಟ್ಟರೆ
ನಿಲ್ಲುವುದು ನಮ್ಮ ಜೀವನ
ಭಾರ ಹೆಚ್ಚಾಗಿ ಬುಟ್ಟಿ ಏಳದಿದ್ದರೆ
ಸಹಾಯ ನೀಡುವ ಕೈಗಳು
ಇದ್ದೇ ಇರುತ್ತವೆ ಈ ಜಗತ್ತಿನಲ್ಲಿ

ಹೊರುವ ಗುಡ್ಡವ ನೋಡಿ
ಅಂಜಿ ಹಿಂದೆಜ್ಜೆ ಹಾಕಬಾರದು
ಇಂದಲ್ಲ ನಾಳೆ ಖಾಲಿಯಾಗಲೇಬೇಕು
ಬುಟ್ಟಿ ಬುಟ್ಟಿಯ ತುಂಬಿಹೊತ್ತು
ಸಂಜೆಹೊತ್ತಿನವರೆಗೆ ಕೆಲಸಮಾಡಿ
ಖಾಲಿ ಬುಟ್ಟಿಯ ಹಿಡಿದು ಹೊರಡಬೇಕು

ನಾಳೆ ನಾವು ಕೆಲಸಕ್ಕೆ ಬರದಿದ್ದರೂ
ಮಣ್ಣು ಕಾಯದೇ ಖಾಲಿಯಾಗುತ್ತದೆ

**-ನರಸಿಂಹಾರೆಡ್ಡಿ ಯಂಕಾಮೋಳ,**
**ಸೇಡಂ**

## ಕಾಡುವ ದಿನಗಳು

ಹದ ಬಿಸಿಲು ಕದ ತೆರೆದು
ಇಣುಕಿ ನೋಡುವ ಮೊದಲೇ
ಮರಳ ದಿನ್ನೆ ಕರಗಿಸಬೇಕು
ಬಿಸಿಯ ಉಸಿರು ಹತ್ತಿಕ್ಕಿ
ಬದಲಾಗದ ಬವಣೆಯ ಚಿತ್ರಕ್ಕೆ
ಬಣ್ಣ ಬಳಿಯಲಾಗುವುದೇ?
ತಿರುಗಿ ಬರದ ಹರೆಯ
ತೂಗಿ ಹೇಳಿತು ಲೆಕ್ಕ
ತಾಳ ತಪ್ಪುತ್ತಿದೆ ಈಗೀಗ
ಗೊತ್ತಿಲ್ಲ ಬಿಡು ಗೆಳೆಯ
ಜತೆಗಿದ್ದರೆ ಸಮ ಸಮ
ಹಂಚಿಕೊಳ್ಳೋಣವೇ ಜೀವನದ ಸಾರ?

ಉಂಡು ಉಡುವ ಚಿಂತೆ
ನಿನ್ನೆ ನಾಳೆಗಿಲ್ಲ ಇಂದಿನದಷ್ಟೇ
ಅರಸನಂತೆ ಅರಗಿಸಿಕೊಳ್ಳುವ
ಹುಂಬು ಮನಸ್ಸು ಹದಗೊಳ್ಳುತ್ತಿರುವಾಗ
ಮಾತು ಮೌನಗಳ ನಡುವೆ
ಕಥೆ ಹುಟ್ಟಬಹುದೇ?

ಕಸುವು ಕಮರಿಲ್ಲ ಹುಸಿ ನೋಟವಿಲ್ಲ
ಬೆಸೆದ ಭಾವಗಳಲ್ಲಿ ಧನ್ಯತೆಯ ಕುಸುರು
ಭಾರ ಹೊರಿಸಿಹೆನೆಂದು ಕುಗ್ಗಬೇಡ
ಇರಲಿ ಹೊತ್ತದ್ದು ಹೊರೆ ಇರಬಹುದು
ಇಳಿಸಿ ಬರುವೆನು ಅದನು
ನಿರಾಳವಾಗಿರಬಾರದೇ ನೀನು?

ನನ್ನ ನಿನ್ನ ನಡುವೆ
ನಗುವ ದೋಣಿಯು ನಲಿದು
ಬದುಕಿನ ನದಿಯ ಸೆಳೆತದಲಿ ಉಲಿದು
ಏನಿದ್ದರೂ ಸಾಗಬೇಕು ಸಂಕಷ್ಟಗಳ ಮೀಟಿ
ದುಡಿವ ಕೈಗಳು ದಣಿವಾರಿಸಿಕೊಳ್ಳಲು
ಬಿಡುವವೇ ಕಾಡುವ ದಿನಗಳು?

**-ಲಲಿತಾ ಪಾಟೀಲ, ಧಾರವಾಡ**